ಕಳಿಸುತ್ತಿದ್ದುದು ನೆನಪಾಯಿತು. ಅನತಿ ದೂರದಲ್ಲೇ ಪದ್ಮಿನಿ ಪ್ರಶಾಂತರೊಂದಿಗೆ ಸಾಗುತ್ತಿದ್ದರು. ಪ್ರಶಾಂತ ವ್ಹೀಲ್‌ಚೇರಿನಲ್ಲಿದ್ದರೆ ಪದ್ಮಿನಿ ಬಿಳಿಯ ಸ್ಲೀವ್‌ಲೆಸ್‌ಗೌನಿನಲ್ಲಿ ಮಿಂಚುತ್ತಿದ್ದರು. ಆಗಲೇ ಅಮೆರಿಕೆಯಲ್ಲಿದ್ದವರಂತೆ... ಅವರಿಗೆ ವಿದೇಶದ ಹುಚ್ಚು ಕೊಂಚ ಜಾಸ್ತಿಯೇ ಎನ್ನಬೇಕು. “ನಿಮ್ಮ ಪಾಸ್‌ಪೋರ್ಟ್ ಮತ್ತು ಡಿ – 160 ಫಾರ್ಮ್‌ಗಳನ್ನು ಕೈಯಲ್ಲಿಟ್ಟುಕೊಂಡು ಮುಂದೆ ಹೋಗಿ” ಎಂದೊಬ್ಬ ಧ್ವನಿವರ್ಧಕದಲ್ಲಿ ಇಂಗ್ಲಿಷ್‌ನಲ್ಲಿ ಕೂಗುತ್ತಿದ್ದ. ಹಾಗೆ ತೋರಿಸುತ್ತಲೇ ಮುಂದೆ ಸಾಗುತ್ತ ಪದ್ಮಿನಿಯವರ ಹತ್ತಿರಕ್ಕೇ ಬಂದಿದ್ದೆ. “ಓಹ್! ವಸುಧಾ, ಯಾವಾಗ ಬಂದ್ರಿ? ನಾವು ಆಗಲೇ ಸರತಿಯಲ್ಲಿ ಸೇರಿಕೊಂಡೆವು. ಹ್ಞಾಂ, ನಿಮಗೇನಾದ್ರೂ ತಿಳೀದಿದ್ರೆ... ನನ್ನ ಕೇಳಿ. ಅಂದ್ರೆ ಎಲ್ಲ ಇಂಗ್ಲಿಷ್‌ನಲ್ಲೇ ಹೇಳ್ತಾರಲ್ಲ ಅದಕ್ಕೇ...” ಎಂದರು. ನಸುನಕ್ಕು ಮುಂದೆ ಸಾಗಿದೆ. ಮನಸ್ಸು ಹುಳ್ಳಗಾಯಿತು. ‘ಸೀಮೆಗಿಲ್ಲದಿರೋಳು... ಇವಳೊಬ್ಬಳಿಗೇ ಇಂಗ್ಲಿಷ್ ಗೊತ್ತಿರೋದು. ನಾವೆಲ್ಲ ಡಿಗ್ರಿ ಓದಿಲ್ವಾ?’ ಎಂದು ಮನಸ್ಸು ವ್ಯಗ್ರವಾಯಿತು. ವೀಸಾ ದೊರೆಯದಿದ್ದರೆ ತೊಂದರೆಯೇನಿಲ್ಲ. ಅವರು ಮಗಳ ಬಾಣಂತನಕ್ಕೆ ಹೊರಟಿದ್ದಾರೆ... ಹೋಗುತ್ತಾರಷ್ಟೇ. ಆದರೆ ಅನಂತ ಕಟ್ಟಿದ ಫೀಸ್ ದುಡ್ಡು ವ್ಯರ್ಥವಾಗುತ್ತದೆ. ಅವನಿಗೇನು ಹೇಳಬೇಕೋ... ಅಲ್ಲದೇ ‘ಸರಿಯಾಗಿ ಇಂಟರ್‌ವ್ಯೂ ಕೊಡಲು ಬರಬೇಕಲ್ಲ...’ ಎಂಬ ಪದ್ಮಿನಿಯ ಕೊಂಕು ಮಾತನ್ನೂ ಕೇಳಬೇಕು. ಆಗ ಸುಮಂತನನ್ನು ಹಿಡಿಯುವುದು ಇನ್ನೂ ಕಷ್ಟ. ‘ಹಾಗಾಗದಿರಲಪ್ಪ... ದೇವರೇ...’ ಎಂದು ಮನದಲ್ಲೇ ಮೊರೆಯಿಟ್ಟೆ.

ನಮಗೆಲ್ಲ ಕುಳಿತುಕೊಳ್ಳಲು ಸನ್ನೆ ಮಾಡಿದರು. ವ್ಹೀಲ್‌ಚೇರ್ ಇದ್ದುದರಿಂದ ಪದ್ಮಿನಿ, ಪ್ರಶಾಂತರನ್ನು ಸೀದಾ ಕೌಂಟರಿನತ್ತ ಕರೆದೊಯ್ಯಲಾಯಿತು. ಎರಡೇ ನಿಮಿಷಗಳಲ್ಲಿ ಅವರು ಎಲ್ಲ ಮುಗಿಸಿಕೊಂಡು ಗೆದ್ದವರಂತೆ ಬೀಗುತ್ತ ಕೈ ಮಾಡಿ ಹೋದಾಗ ಸಪ್ಪೆಯಾಗಿ ನಕ್ಕು ನಿಟ್ಟುಸಿರಿಟ್ಟೆ. ಅವರ ಈ ದೊಡ್ಡಸ್ತಿಕೆಯ ಪ್ರದರ್ಶನ ಸುಮಂತನಿಗೆ ಅತೀವ ಕೋಪ ತರಿಸುತ್ತಿತ್ತು. ಮದುವೆಗೆ ಮುಂಚೆ ನಡೆದ ಘಟನೆಯಿಂದ ಎಲ್ಲರ ಮನಸ್ಸುಗಳೂ ಹುಳ್ಳಗಾಗಿದ್ದವು. ಮಾತುಕಥೆಯಲ್ಲಿ ಪದ್ಮಿನಿ ‘ನಾವು ಮಗಳಿಗೆ ಬಳೆ, ಸರ, ನೆಕ್‌ಲೇಸ್, ಓಲೆ, ಝುಮುಕಿ ಎಲ್ಲ ಇಡ್ತೇವೆ. ಹುಡುಗಂಗೆ ಬ್ರೇಸ್‌ಲೆಟ್, ಸರ ಕೊಟ್ಟು ಅದ್ದೂರಿಯಾಗಿ ಮದುವೆ ಮಾಡ್ಕೊಡ್ತೇವೆ. ನೀವೇನು ಇಡ್ತೀರಿ?” ಎಂದು ಕೇಳಿದ್ದರು. “ನಾವು ಹುಡುಗಿಗೆ ಮಾಂಗಲ್ಯ ಚೈನು, ಈಗಿನ ಟ್ರೆಂಡ್ ಇರೋ ಎರಡು ಕಂಗನ್ ಇಡ್ತೇವೆ” ಎಂದಿದ್ದೆ. “ಒಂದು ಲಾಂಗ್ ನೆಕ್‌ಲೇಸ್ ಹಾಕಿ. ಸೆಟ್ ಆಗುತ್ತೆ” ಎಂದರು. ನಾನು “ಈಗಾಗಲ್ಲ... ಮುಂದೆ ಸಾಧ್ಯವಾದಾಗ ಹಾಕೋಣ. ನಮಗೂ ಹೆಣ್ಣುಮಕ್ಕಳಿಲ್ಲ. ಸೊಸೆಯರೇ ಎಲ್ಲ. ನಿಧಾನವಾಗಿ ಹಾಕಿದ್ರಾಯ್ತು” ಎಂದೆ. ಅಷ್ಟಕ್ಕೇ ಮಾತು ಮುಗಿದಿತ್ತು. ಅನಂತನೊಂದಿಗೆ ಮಾತಾಡುತ್ತ “ಮದುವೆ ಸರಳವಾಗಿದ್ರೆ ಪರವಾಗಿರಲಿಲ್ಲ. ಅದ್ದೂರಿ ಮದುವೆ ಅಂತಾರೆ. ಅವರೇ ಮದುವೆ ಮಾಡ್ಕೊಟ್ರೂ ನಮಗೂ ತುಂಬಾ ಖರ್ಚಿರುತ್ತೆ ಕಣೋ...” ಎಂದು ಪಟ್ಟೆಯನ್ನೇ ಹೇಳಿದ್ದೆ. ಅವನು “ಅಮ್ಮಾ, ನಾನೂ ಈಗ್ತಾನೇ ಸೆಟಲ್ ಆಗ್ತಾ ಇದೀನಿ. ಮದುವೆಯಾಗಿ ಅವಳು ಬರ್ತಾಳೇಂತ ಮನೆ ನೋಡಿದೀನಿ. ಅಡ್ವಾನ್ಸ್ ಕೊಡಬೇಕು. ಪಾತ್ರೆ, ಪಗಡ ಒಂದೂ ಅಲ್ಲಿಂದ ತರಕ್ಕಾಗಲ್ವಲ್ಲಮ್ಮ. ಇಲ್ಲೇ ತೊಗೋಬೇಕು. ನಂಗೂ ಇಲ್ಲಿ ಖರ್ಚಿದೆ” ಎಂದಿದ್ದ. ನಿಜವೆನಿಸಿತ್ತು. ಪಾಪ, ಅವನಾದ್ರೂ ನಮ್ಮನ್ನು ಬಿಟ್ಟು ಬೇರಾರಿಗೆ ತೊಂದರೆ ಹೇಳ್ಕೋಬೇಕು... ಆದರೆ ಆಗ ಆನೆಬಲವಿತ್ತು. ವಸಂತ ಇನ್ನೂ ಕೆಲಸ ಮಾಡುತ್ತಿದ್ದರು. “ಚಿಂತೆ ಮಾಡಬೇಡ ವಸು. ಈಗ ನಾವೇ ಖರ್ಚು ಮಾಡೋಣ. ನಮಗಾದ್ರೂ ಮಕ್ಕಳನ್ನ ಬಿಟ್ಟರೆ ಯಾರಿದ್ದಾರೆ? ಸುಮಂತನ ಸಮಯಕ್ಕೆ ಅನಂತ ಸೆಟಲ್ ಆಗಿರ್ತಾನೆ...” ಎಂದಿದ್ದರು. “ನಮ್ಮ ವೃದ್ಧಾಪ್ಯದ ಯೋಚನೆ ಮಾಡಬೇಕಲ್ಲ... ನಮಗೆ ಪೆನ್‌ಷನ್ ಇಲ್ಲ” ಎಂದಿದ್ದೆ ಮೆತ್ತಗೆ. “ಎಲ್ಲಾ ಆಗುತ್ತೆ ಬಿಡು... ಮಕ್ಕಳಿಲ್ವಾ?...” ಎಂದಿದ್ದರು. ಹಾಗೆಯೇ ಖರ್ಚು ಮಾಡಿದೆವು. ವಿಜೃಂಭಣೆಯಿಂದ ಮದುವೆ ನಡೆದಿತ್ತು.